ಓ.ಎಸ್. ನಂ. 97/2022 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 8.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 5 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಟಿ.ಜಿ.ಎಸ್ ವಕೀಲರಿಂದಃ**

ನಾನು 5 ನೇ ತರಗತಿ ವಿದ್ಯಾಭಾಸ ಮಾಡಿರುತ್ತೇನೆ. ನಾನು ಹೆಬ್ಬಲಗುಪ್ಪೆಯಲ್ಲಿ ಕಳೆದ 35 ವರ್ಷಗಳಿಂದ ವಾಸವಾಗಿರುತ್ತೇನೆ. ನನ್ನ ತಾಯಿ ದಾವಆಸ್ತಿಯ ಕ್ರಯಪತ್ರ ಬರೆದುಕೊಡಲು ಕೋರಿ ಈ ದಾವೆಯನ್ನು ಹಾಕಿರುತ್ತಾರೆ. ನನ್ನ ತಾಯಿ ನನಗೆ ಜಿ.ಪಿ.ಎ ಬರೆದುಕೊಟ್ಟಿರುತ್ತಾರೆ. ನನ್ನ ತಾಯಿಗೆ ಕಾಲು ನೋವು, ಬಿ.ಪಿ ಮತ್ತು ಮಧುಮೇಹ ಖಾಯಿಲೆಯಿರುತ್ತದೆ. ಆ ರೀತಿ ಖಾಯಿಲೆ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಮಾಡುತ್ತಿದ್ದ ವ್ಯವಹಾರದ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಾಯಿ ಮಾಡಿಕೊಂಡಿದ್ದಾರೆ ಎಂದು ಹೇಳುವ ಕರಾರುಪತ್ರದ ಸಮಯದಲ್ಲಿ ನಾನು ಹಾಜರಿದ್ದೆ. ದಾವಆಸ್ತಿಯ ಬಗ್ಗೆ ಎಷ್ಟು ಜನ ಮಾಲೀಕರು ಇರುತ್ತಾರೆ, ಅವರ ವಂಶವೃಕ್ಷದ ಬಗ್ಗೆ ನಾವು ವಿಚಾರಿಸಿರುತ್ತೇವೆ. 1 ನೇ ಪ್ರತಿವಾದಿಗೆ ಎಷ್ಟು ಜನ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದು ವಿಚಾರಿಸಿರುತ್ತೇವೆ. ನಾನು ಪ್ರತಿವಾದಿಯರಿಂದ ಕಂದಾಯ ಇಲಾಖೆಯವರು ನೀಡಿರುವ ವಂಶವೃಕ್ಷವನ್ನು ಪಡೆದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿಗೆ ಪುರದಕಟ್ಟೆ ಗ್ರಾಮದಲ್ಲಿ ಹಿರಿಯ ಹೆಂಡತಿ ಇರುತ್ತಾರೆ ಎಂದರೆ ಇರಬಹುದು. ಅದೇ ರೀತಿ ಹಿರಿಯ ಹೆಂಡತಿ ಮೂಲಕ ಜಾವಜಮ್ಮ ಎಂಬ ಮಗಳು ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯ ಬಗ್ಗೆ ನಾನು ಪಹಣಿ, ಇ.ಸಿ ಮತ್ತು ಎಂ.ಆರ್ ದಾಖಲೆಯನ್ನು ನೋಡಿರುತ್ತೇನೆ. ದಾವಆಸ್ತಿಯು 1 ನೇ ಪ್ರತಿವಾದಿಗೆ ಅವರ ತಂದೆಯಿಂದ ಬಂದಿರುತ್ತದೆ. ದಾವಆಸ್ತಿಯ ಪಹಣಿಯಲ್ಲಿ ಎಲ್ಲ ಪ್ರತಿವಾದಿಯರ ಹೆಸರು ಇರುತ್ತದೆ. ದಾವಆಸ್ತಿಯ ಪಹಣಿಯಲ್ಲಿ ತೀರಿಕೊಂಡಿದ್ದ ಮಹದೇವಮ್ಮ ರವರ ಹೆಸರು ಸಹ ಇತ್ತು. ನನಗೆ 1 ನೇ ಪ್ರತಿವಾದಿಯು ದಾವಆಸ್ತಿಯನ್ನು ತೋರಿಸಿರುತ್ತಾರೆ. ಅವರು ಆಸ್ತಿಯನ್ನು ತೋರಿಸಿದ ದಿನವೇ ಮಾರಾಟದ ಬಗ್ಗೆ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆ ಸಮಯದಲ್ಲಿ ನಾನು, ನನ್ನ ತಾಯಿ, ಪ್ರತಿವಾದಿಯರು ಹಾಗೂ ಸಾಕ್ಷಿದಾರರು ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಪ್ರತಿವಾದಿಯರು ಮನೆ ಕಟ್ಟಲು ಹಣದ ಅವಶ್ಯಕತೆ ಇದುದ್ದರಿಂದ ಆಸ್ತಿಯನ್ನು ಮಾರಾಟ ಮಾಡುತ್ತಿರುವುದಾಗಿ ಹೇಳಿರುತ್ತಾರೆ. ಪ್ರತಿವಾದಿಯರು ಮನೆ ಕಟ್ಟಲು ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾತುಕತೆಯು 1 ನೇ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ. ಮಾತುಕತೆಯ ಸಮಯದಲ್ಲಿ ಸಾಕ್ಷಿದಾರರರನ್ನು 1 ನೇ ಪ್ರತಿವಾದಿಯು ಕರೆದುಕೊಂಡು ಬಂದಿರುತ್ತಾರೆ. 1 ನೇ ಪ್ರತಿವಾದಿ ಸ್ವಲ್ಪ ಬುದ್ದಿಮಾಂಧ್ಯರು ಎಂದರೆ ಸರಿಯಲ್ಲ. ಅವರಿಗೆ ಅಂದಾಜು 70 ವರ್ಷವಾಗಿರುತ್ತದೆ. ಅವರಿಗೆ 80 ವರ್ಷಕ್ಕಿಂತ ಜಾಸ್ತಿ ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯನ್ನು ಇಟ್ನ ಗ್ರಾಮಕ್ಕೆ ಮದುವೆ

ಮಾಡಿಕೊಡಲಾಗಿರುತ್ತದೆ. ಮಾತುಕತೆಯು ಮದ್ಯಾಹ್ನ 1 ಗಂಟೆಯಲ್ಲಿ ಆಗಿರುತ್ತದೆ. 8 ನೇ ಪ್ರತಿವಾದಿಯನ್ನು ಮಾತುಕತೆಗೆ 1 ನೇ ಪ್ರತಿವಾದಿಯು ಕರೆದುಕೊಂಡು ಬಂದಿರುತ್ತಾರೆ. ಮಾತುಕತೆಯಾದಾಗ ಅಲ್ಲಿ ಯಾವುದೇ ಹಣದ ವ್ಯವಹಾರವಾಗಿರುವುದಿಲ್ಲ, ನಿಪಿ2 ನೋಂದಣಿಯಾದಾಗ ನೋಂದಣಿ ಕಛೇರಿಯಲ್ಲಿ ಹಣವನ್ನು ನೀಡಲಾಗಿರುತ್ತದೆ. ಮಾತುಕತೆಯು ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾಖಲಾತಿಗಳನ್ನು 1 ನೇ ಪ್ರತಿವಾದಿ ಸದರಿ ದಿನ ಒದಗಿಸಿಕೊಟ್ಟಿರುತ್ತಾರೆ. ಯಾವ ದಾಖಲೆಗಳನ್ನು ಒದಗಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಪಹಣಿ, ಆಧಾರ್ ಕಾರ್ಡನ್ನು ನೀಡಿರುತ್ತಾರೆ ಎನ್ನುವರು. ದಾವಆಸ್ತಿಯು ದುರಸ್ತಿಯಾಗಿರುವ ಬಗ್ಗೆ ದಾಖಲೆಯನ್ನು ಪರಿಶೀಲಿಸಿರುತ್ತೇನೆ. ದುರಸ್ತಿಯಾಗಿರುವ ದಾಖಲೆಯನ್ನು ನಾನು ನೊಂದಣಿ ಕಛೇರಿಯಲ್ಲಿ ಪರಿಶೀಲನೆ ಮಾಡಿರುತ್ತೇನೆ. ದಾವಆಸ್ತಿಯನ್ನು ಖರೀದಿಸುವ ಬಗ್ಗೆ ವಕೀಲರ ಬಳಿ ಕಾನೂನು ಸಲಹೆಯನ್ನು ಪಡೆದುಕೊಂಡಿರುವುದಿಲ್ಲ. ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಯಾವುದೇ ಮಾತುಕತೆಯಾಗಿರುವುದಿಲ್ಲ, ಹಣದ ಭದ್ರತೆಗಾಗಿ ಆಧಾರಪತ್ರ ಮಾಡಿಕೊಳ್ಳುವ ಬಗ್ಗೆ ಊರಿನಲ್ಲಿ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ2 ದಾಖಲೆಯನ್ನು ತಯಾರಿಸಿದ ಮುರಳಿಧರ ನಮ್ಮ ಊರಿನವರು ಎಂದರೆ ಸಾಕ್ಷಿದಾರರು ಹೆಚ್.ಡಿ.ಕೋಟೆಯಲ್ಲಿರುತ್ತಾರೆ, ನಮ್ಮ ಊರಿನವರು ಎಂಬ ಬಗ್ಗೆ ಗೊತ್ತಿರುವುದಿಲ್ಲ ಎನ್ನುವರು. ನಾನು, ಪತ್ರಬರಹಗಾರ ಮತ್ತು ಉಪನೋಂದಣಾಧಿಕಾರಿ ಯವರು ಶಾಮೀಲಾಗಿ ಆಧಾರಪತ್ರ ಎಂದು ಹೇಳಿ ಕರಾರುಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2016 ರಲ್ಲಿ ನಮ್ಮ ಊರಿನಲ್ಲಿ ಪ್ರತಿ ಎಕರೆಗೆ 3.20 ಲಕ್ಷ ಮೌಲ್ಯವಿತ್ತು. ನಾನು ನೋಂದಣಿ ಕಛೇರಿಗೆ ಹೋಗಿ ಸದರಿ ಸಮಯದಲ್ಲಿ ಪ್ರತಿ ಎಕರೆಗೆ ಎಷ್ಟು ಮೌಲ್ಯವಿತ್ತು ಎಂದು ವಿಚಾರಿಸಿರುತ್ತೇನೆ. ಆ ಬಗ್ಗೆ ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ2 ದಾಖಲೆಯನ್ನು ಮುರಳೀಧರ ಎಂಬ ಪತ್ರಬರಹಗಾರರು ಬರೆದಿರುತ್ತಾರೆ. ನಿಪಿ2 ದಾಖಲೆಯನ್ನು ನಾನು ಹೇಳಿ ಬರೆಸಿರುತ್ತೇನೆ. ಸದರಿ ದಿನ ನೋಂದಣಿ ಕಛೇರಿಗೆ ಪಹಣಿಯಲ್ಲಿ ನಮೂದಾಗಿದ್ದ 8 ಜನರು ಬಂದಿದ್ದರು. ನಿಪಿ2 ಕ್ಕೆ ಸಾಹಿ ಮಾಡಿರುವ ಸಾಕ್ಷಿದಾರರನ್ನು ನಾನು ಕರೆದುಕೊಂಡು ಹೋಗಿರುತ್ತೇನೆ. ನಾನು ಮತ್ತು ಸಾಕ್ಷಿದಾರರು ಸೇರಿ ನಿಪಿ2 ನ್ನು ತಯಾರಿಸಲು ಪತ್ರಬರಹಗಾರರಿಗೆ ಮಾಹಿತಿಯನ್ನು ನೀಡಿರುತ್ತೇವೆ. ನಿಪಿ2 ದಾಖಲೆಯನ್ನು ತಯಾರಿಸಿದ ನಂತರ ಪ್ರತಿವಾದಿಗಳಿಗೆ ಓದಿ ಹೇಳಿರುವುದಿಲ್ಲ ಎಂದರೆ ಸಾಕ್ಷಿದಾರರು ಎಲ್ಲರಿಗೂ ಓದಿ ಹೇಳಿರುತ್ತೇವೆ ಎನ್ನುವರು. ನಿಪಿ2 ದಾಖಲೆಗೆ ನೋಂದಣಿ ಕಛೇರಿಯಲ್ಲಿ ಮೊದಲು 1, 2, 7, 6, 8, 3, 5 ಮತ್ತು 4 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಅವರು ಸಹಿಯನ್ನು ಸಬ್ ರಿಜಿಸ್ಟ್ರಾರ್ ಕಛೇರಿ ಒಳಗೆ ಮಾಡಿರುತ್ತಾರೆ. ಅವರನ್ನು ಹೊರತುಪಡಿಸಿ ಸಾಕ್ಷಿದಾರರು ಸಹ ಸಬ್ ರಿಜಿಸ್ಟ್ರಾರ್ ಕಛೇರಿ ಒಳಗೆ ಮಾಡಿರುತ್ತಾರೆ. ಮೊದಲಿಗೆ ಸೋಮನಾಯಕ ನಂತರ ತಮ್ಮಯ್ಯನಾಯಕ ಸಹಿ ಮಾಡಿರುತ್ತಾರೆ. ದಾವಆಸ್ತಿಯನ್ನು ಈಗ ನಾವೇ ವ್ಯವಸಾಯ ಮಾಡುತ್ತಿದ್ದೇವೆ. ಅದರಲ್ಲಿ ಜೋಳ ಬೆಳೆದಿರುತ್ತೇವೆ. ಅದೇ

ರೀತಿ ಕಾಕಡ ಹೂವಿನ ಗಿಡವನ್ನು ಸಹ ಹಾಕಿರುತ್ತೇವೆ. ಪ್ರತಿ ಎಕರೆಗೆ 15 ಕ್ವಿಂಟಲ್ ಜೋಳ ಬೆಳೆಯುತ್ತಿದ್ದು ಪ್ರತಿ ಕ್ವಿಂಟಾಲಿಗೆ ರೂ.1500/- ಬೆಲೆ ಇರುತ್ತದೆ. 200 ಕಾಕಡ ಗಿಡದಿಂದ ಪ್ರತಿದಿನ 3 ಕೆ.ಜಿ ಕಾಕಡ ಹೂ ಸಿಗುತ್ತದೆ ಎಂದರೆ ಸರಿಯಲ್ಲ. ಪ್ರತಿ ಕೆ.ಜಿ ಕಾಕಡ ಹೂವಿಗೆ ದಸರಾ ಸಮಯದಲ್ಲಿ ರೂ.500/- ಇರುತ್ತದೆ. ಕಾಕಡ ಗಿಡದಿಂದ ಪ್ರತಿ ವರ್ಷ ರೂ.15000/- ಅದಾಯ ಇರುತ್ತದೆ. ಪ್ರತಿವಾದಿಯರು ನನಗೆ ದಾವಆಸ್ತಿಯನ್ನು ಆಧಾರಬೋಗ್ಯ ಮಾಡಿ ಸ್ವಾಧೀನ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಆಸ್ತಿಯನ್ನು ಆಧಾರಬೋಗ್ಯ ಮಾಡಿ ಸಾಲದ ಹಣ ಪಡೆದುಕೊಂಡಿದ್ದು, ಬಡ್ಡಿ ನೀಡಲು ಸಾಧ್ಯವಾಗದಿದ್ದರಿಂದ ಅದರ ಸ್ವಾಧೀನವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ನಿಜ ವಿಚಾರ ಗೊತ್ತಾಗುತ್ತದೆ ಎಂದು ಅವರಿಂದ ನಾನು ಜಿ.ಪಿ.ಎ ಪಡೆದುಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಬ್ಬಲಗುಪ್ಪೆ ಗ್ರಾಮದಲ್ಲಿ ಪ್ರತಿ ಎಕರೆಗೆ 17 ರಿಂದ 20 ಲಕ್ಷ ಮೌಲ್ಯವಿರುತ್ತದೆ ಎಂದರೆ ಸರಿಯಲ್ಲ. ಹ್ಯಾಂಡಪೋಸ್ಟನಿಂದ ಹೆಬ್ಬಲಗುಪ್ಪೆ ಗ್ರಾಮ 5 ಕಿ.ಮೀ ದೂರದಲ್ಲಿರುತ್ತದೆ. ದಾವಆಸ್ತಿಯು ಹ್ಯಾಂಡಪೋಸ್ಟಿಗೆ ಹತ್ತಿರದಲ್ಲಿರುವುದರಿಂದ ಹೆಚ್ಚು ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವಆಸ್ತಿ ಸರ್ವೆನಂಬರನ್ನು ಹೊರತುಪಡಿಸಿ ಬೇರೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ನಿಪಿ3 ರಂತೆ ನೋಟಿಸನ್ನು ನೀಡಿದಾಗ ಉಳಿಕೆ ಹಣ ನನ್ನ ಖಾತೆಯಲ್ಲಿರಲಿಲ್ಲ. ನಿಪಿ2 ದಾಖಲೆಯಾದ 3 ವರ್ಷದ ಒಳಗೆ ಕ್ರಯಪತ್ರ ಏಕೆ ಬರೆದುಕೊಟ್ಟಿರುವುದಿಲ್ಲ ಎಂದು ನಾನು ಪ್ರತಿವಾದಿಯರ ಬಳಿ ಕೇಳಿರುತ್ತೇನೆ. ಯಾವ ದಿನಾಂಕದಂದು ಕೇಳಿರುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ. ಪ್ರತಿವಾದಿಯರ ಬಳಿ ಕೇಳಲು ಹೋದಾಗ 1 ನೇ ಪ್ರತಿವಾದಿಯ ತಮ್ಮನಾದ ತಮ್ಮ ಯ್ಯನಾಯಕ ರನ್ನು ಕರೆದುಕೊಂಡು ಹೋಗಿರುತ್ತೇನೆ. ನಾನು ಸದರಿ ವಿಚಾರವನ್ನು ನನ್ನ ನೋಟಿಸು ಅಥವಾ ದಾವಪತ್ರದಲ್ಲಿ ಹೇಳಿರುವುದಿಲ್ಲ. ನಾನು ಪ್ರತಿವಾದಿಯರ ಸಹಿಯನ್ನು ಪಡೆದುಕೊಂಡು ದಾವಆಸ್ತಿಯ ದುರಸ್ತಿಯನ್ನು ಮಾಡಿಸಲು ಪ್ರಯತ್ನಿಸಿರುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪಹಣಿಯಲ್ಲಿ ನಮೂದಾಗಿದ್ದ ಮಹದೇವಮ್ಮ ರವರ ಹೆಸರನ್ನು ತೆಗೆಸಲು ನಾನು ಅರ್ಜಿಯನ್ನು ನೀಡಿರುತ್ತೇನೆ. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ತಾನು ಹಾಜರುಪಡಿಸಿರುವ ದಾಖಲೆಯನ್ನು ನೋಡಿ ಯಾವುದೇ ಅರ್ಜಿ ಇರುವುದಿಲ್ಲ ಎನ್ನುವರು. ನಿಜವಾಗಿ ಕ್ರಯದ ಕರಾರು ಆಗಿದ್ದಲ್ಲಿ 3 ವರ್ಷದ ಒಳಗೆ ನಾನು ದಾವಆಸ್ತಿಯ ಎಲ್ಲ ದಾಖಲೆಗಳನ್ನು ಪಡೆದುಕೊಂಡು ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳುತ್ತಿದ್ದೆ, ಪ್ರತಿವಾದಿಯರು ಆಧಾರಪತ್ರವನ್ನು ಮಾಡಿಕೊಟ್ಟಿದ್ದರಿಂದ ದಾವಆಸ್ತಿಯನ್ನು ನನಗೆ ಬಡ್ಡಿ ಬಾಬ್ತು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನೋಟಿಸ್ ನೀಡಿದ ಕೂಡಲೆ ನಾನು ಈ ದಾವೆಯನ್ನು ಹಾಕಿರುವುದಿಲ್ಲ. ನೋಟಿಸ್ ನೀಡಿದ 2 ತಿಂಗಳ ನಂತರ ನಾನು ಈ ದಾವೆಯನ್ನು ಹಾಕಿರುತ್ತೇನೆ. ನನ್ನ ಹಾಗೂ ಪ್ರತಿವಾದಿಯರ ನಡುವೆ ನಿಜವಾಗಿ ಕರಾರುಪತ್ರವಾಗಿದ್ದರೆ ನೋಟಿಸ್

ನೀಡಿದ ಕೂಡಲೇ ದಾವೆ ಹಾಕುತ್ತಿದ್ದೆ ಎಂದರೆ ಸರಿಯಲ್ಲ. ನೋಟಿಸ್ ನೀಡಿದ ನಂತರವೂ ಸಹ ನಾನು ದಾವಆಸ್ತಿ ನೋಂದಣಿಗೆ ಬೇಕಾದ ದಾಖಲೆಯನ್ನು ಪಡೆದುಕೊಳ್ಳಲು ಪ್ರಯತ್ನಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.